**<u>ಸಾಕ್ಷಿಗೆ ದಿನಾಂಕ 18-04-2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

**<u>ಸಾಕ್ಷಿಗೆ ಕೇವಲ ಹಿಂದಿ ಭಾಷೆ ಬರುತ್ತಿದ್ದು, ಶ್ರೀ. ಎಸ್.ಎಂ. ವಕೀಲರನ್ನು ಭಾಷಾಂತರಗಾರರನ್ನಾಗಿ ನೇಮಿಸಲಾಯಿತು. ಅವರಿಗೂ ಸಹ ಪ್ರಮಾಣ ವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀಮತಿ. ಎಂ.ವಿ.ಎಲ್. ವಕೀಲರಿಂದಃ</u>**

ನನ್ನ ತಂದೆಗೆ ನಾವಿಬ್ಬರು ಗಂಡು ಮಕ್ಕಳು ಇದ್ದು, ಒಬ್ಬಳು ಹೆಣ್ಣು ಮಗಳು ಇರುತ್ತಾಳೆ. ಸದರಿ ನನ್ನ ಸಹೋದರನ ಹೆಸರು ಜಾಹಂಗೀರ ಪಟೇಲ್ ಆಗಿದ್ದು ಆತನು ಈ ದಾವೆಯ 3 ನೇ ಪ್ರತಿವಾದಿ ಇರುತ್ತಾನೆ. ಹೆಣ್ಣು ಮಗಳ ಹೆಸರು ಮುಮತಾಜ ಬೇಗಂ ಇರುತ್ತದೆ.

ನನ್ನ ತಂದೆಗೆ ಒಟ್ಟು ಮೂರು ಜನ ಸಹೋದರರು ಇರುತ್ತಾರೆ. ಸದರಿಯವರ ಹೆಸರು ಮೋದಿನಸಾಬ, ಮೆಹಬೂಬ ಸಾಬ ಮತ್ತು ಅಜೀಜ ಸಾಬ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಂದೆಯ ಸಹೋದರರ ಪೈಕಿ ಒಬ್ಬರಾಗಿರುತ್ತಾರೆ ಎಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿ ನನ್ನ ತಂದೆಯ ಸಹೋದರರ ಪೈಕಿ ಇನ್ನೊಬ್ಬ ಸಹೋದರನಾಗಿರುತ್ತಾನೆ ಎಂದರೆ ಸರಿ. ಮೋದಿನಸಾಬ ಇತನು ಬಹಳ ವರ್ಷಗಳ ಹಿಂದೆ ಮೃತನಾಗಿದ್ದು, ಆತನ ಮಗನ ಹೆಸರು ಅಮೀರಮಿಯಾನ ಇರುತ್ತದೆ ಎಂದರೆ ಸರಿ. ಸದರಿ ಅಮೀರಮಿಯಾನ ಇತನು ಮೃತಪಟ್ಟಿದ್ದು, 5 ರಿಂದ 7 ನೇ ಪ್ರತಿವಾದಿಗಳು ಆತನ ವಾರಸಾದಾರರು ಇರುತ್ತಾರೆ ಎಂದರೆ ಸರಿ.

ನನ್ನ ಅಜ್ಜ ಮಶಾಕಸಾಬ ಇತನಿಗೆ ನಾನು ನೋಡಿರುವುದಿಲ್ಲ. ನನ್ನ ತಂದೆ 1972-73 ನೇ ಇಸ್ವಿಯಿಂದ ಹೈದರಾಬಾದಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ.

ದಾವಾ ಸ್ವತ್ತು ಸರ್ವೆ ನಂಃ 71/3 ಮೊದಲು ನನ್ನ ಅಜ್ಜನ ಹೆಸರಿನಲ್ಲಿ ಇತ್ತು ಎಂದರೆ ಸರಿ. ನನ್ನ ಅಜ್ಜ ಮಶಾಕಸಾಬ ಇತನು ಯಾವಾಗ ಮರಣಹೊಂದಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಜ್ಜ ಮಶಾಕಸಾಬ ಇತನು ಮರಣಹೊಂದಿದ ನಂತರ ದಾವಾ ಆಸ್ತಿಯನ್ನು ನನ್ನ ತಂದೆ ಹಾಗೂ ಆತನ

ಮೂರು ಜನ ಸಹೋದರರು ಸಮನಾಗಿ ಪಾಲುವಿಭಾಗ ಮಾಡಿಕೊಂಡಿದ್ದರ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ನನ್ನ ತಂದೆ ತನ್ನ ಪಾಲಿಗೆ ಬಂದ 2 ಎಕರೆ 30 ಗುಂಟೆ ಜಮೀನನ್ನು 1 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿ ಹೈದರಾಬಾದಿಗೆ ಹೊರಟುಹೋಗಿರುತ್ತಾನೆ ಎಂದರೆ ಸರಿಯಲ್ಲ. ಸದರಿ ನನ್ನ ತಂದೆ ತನ್ನ ಪಾಲಿಗೆ ಬಂದ ಆಸ್ತಿಯನ್ನು ದಿಃ 02-05-1977 ರಂದು ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ.

ನನ್ನ ತಂದೆ ಲಾಡಲೇಪಟೇಲ್ ಇತನು 1996 ನೇ ಇಸ್ವಿಯಲ್ಲಿ ಮರಣಹೊಂದಿರುತ್ತಾನೆ. ನನ್ನ ತಂದೆ ತನ್ನ ಜೀವಿತಾವಧಿಯಲ್ಲಿ ದಾವಾ ಆಸ್ತಿಯಲ್ಲಿ ಪಾಲು ಬೇಕು ಎಂದು ದಾವೆ ಹಾಕಿದ್ದರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿಯ ಪೈಕಿ 2 ಎಕರೆ 30 ಗುಂಟೆ ಜಮೀನನ್ನು ನನ್ನ ತಂದೆ 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರಿಂದ ಆತನ ಸದರಿ ದಾವಾ ಆಸ್ತಿಯ ಮಾಲೀಕನಾಗಿ ಆತನ ಹೆಸರಿಗೆ ಒಟ್ಟು 5 ಎಕರೆ 19 ಗುಂಟೆ ಜಮೀನು ಪಹಣಿ ಪತ್ರಿಕೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ತನ್ನ ಪಾಲಿಗೆ ಬಂದ ಜಮೀನನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿರುವ ವಿಷಯ ನನಗೆ ಮತ್ತು ನನ್ನ ಸಹೋದರನಿಗೆ ಗೊತ್ತಿರುವುದರಿಂದ ನನ್ನ ಸಹೋದರ ಈ ದಾವೆಯನ್ನು ಸಲ್ಲಿಸಲು ನನಗೆ ಸಹಕಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಜಮೀನಿನ ಮೌಲ್ಯ ಹೆಚ್ಚಾಗಿದ್ದು, 1 ನೇ ಪ್ರತಿವಾದಿಗೆ ತೊಂದರೆ ನೀಡಿ, ಆತನಿಂದ ಹೆಚ್ಚಿನ ಹಣ ಪಡೆಯಬೇಕೆಂಬುದರಿಂದ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆ ತನ್ನ ಪಾಲಿಗೆ ಬಂದ ಆಸ್ತಿಯನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರೂ ಸಹ ನಾನು ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.